# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.21-2015** **ಪಿ . ಡಬ್ಲುಃ 3**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಮಹೇಶ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 01-10-2022. |

**ಪಾಟೀ ಸವಾಲುಃ  ಶ್ರೀ.ಎನ್.ಆರ್  ವಕೀಲರಿಂದಃ**

ನಾನು ಬಿ.ನಾಗರಾಜೇಅರಸ್ ರವರ ಸಹಾಯಕನಾಗಿ ಕೆಲಸ ನಿರ್ವಹಿಸುತ್ತಿದ್ದು, ನಾನು ಪತ್ರ ಬರಹಗಾರರ ಲೆಸೆನ್ಸ್ ಅನ್ನು ಹೊಂದಿರುವುದಿಲ್ಲ. ನಾನು ಬಿ.ನಾಗರಾಜೇಅರಸ್ ರವರು ಕಚೇರಿಯಲ್ಲಿ ಅವರು ಹೇಳಿದ ಕೆಲಸಗಳನ್ನು ಮಾಡಿಕೊಂಡು ಇರುತ್ತೇನೆ ಎಂದರೆ ಸರಿ. ನಿಪಿ-1 ಕ್ಕೆ ನಾನು ಎಷ್ಟು ಗಂಟೆಗೆ ಸಹಿ ಮಾಡಿದೆನು ಎಂದು ನನಗೆ ನೆನಪಿಲ್ಲ. ನನ್ನೊಂದಿಗೆ ಪುಟ್ಟಸ್ವಾಮಿ ರವರು ನಿಪಿ-1 ಕ್ಕೆ ಸಹಿ ಮಾಡಿರುತ್ತಾರೆ. ಅವರು ಶಿರಮಳ್ಳಿಯವರು. ಬಿ.ನಾಗರಾಜೇಅರಸ್ ರವರು ದಾಖಲಾತಿಗಳಿಗೆ ಸಂಬಂಧಿಸಿದಂತೆ ಲೆಡ್ಜರ್ ಅನ್ನು ನಿರ್ವಹಿಸುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಿಪಿ-1 ರಲ್ಲಿನ ಒಕ್ಕಣೆಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ನಿಪಿ-1 ನಿವೇಶನದ ಕ್ರಯದ ಕರಾರು ಪತ್ರವಾಗಿದ್ದು  ನಿವೇಶನವನ್ನು  ಸುಮಾರು ರೂ1,50,000/- ಗಳಿಗೆ ಮಾರಾಟ ಮಾಡಿರುತ್ತಾರೆ. ವಾದಿ ಪ್ರತಿವಾದಿ ಸಹಿ ಮಾಡಿಕೊಟ್ಟಿದ್ದ ಖಾಲಿ ಛಾಪಾಕಾಗದದ ಮೇಲೆ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನಗೆ ಪ್ರತಿವಾದಿ ಗೊತ್ತು, ವಾದಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-1 ರ ಕ್ರಯದ ಕಾರಾರು ಪತ್ರ ಆಗುವ ದಿವಸ ವಾದಿಯವರು ಬಿನಾಗರಾಜೇಅರಸ್ ರವರ ಕಚೇರಿಗೆ ಬಂದಿದ್ದರು. ನಾನು ಬಿ.ನಾಗರಾಜೇಅರಸ್ ರವರ ಕಚೇರಿಯಲ್ಲಿ ಸಹಾಯಕನಾಗಿ ಕೆಲಸ ನಿರ್ವಹಿಸುವುದರಿಂದ ದಿ.26-09-2012 ರಂದು ಯಾವುದೇ ದಾಖಾಲತಿ ಆಗದೇ ಇದ್ದರೂ ಸಹ ಬಿ.ನಾಗರಾಜೇ ಅರಸ್ ರವರ ಮಾತುಕೇಳಿ ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**